



ಇಂದಿರಾ ಗಾಂಧಿ ಅವರೊಂದಿಗೆ

### ಅಂಗಡಿಯವನಿಗೆ ಛೀಮಾರಿ

ನೇರ ನಡೆನುಡಿಯ ಸಾವಿತ್ರಿ ಶಾಸ್ತ್ರಿ ಅವರಿಗೆ ಸಮಾಜಸೇವೆಯ ಜೊತೆಗೆ ಮೋಸ ಅನ್ಯಾಯ ಮಾಡುವವರ ವಿರುದ್ಧ ಸಿಡಿದೇಳುವ ದಿಟ್ಟತನವೂ ಇದೆ. ಒಮ್ಮೆ ಖಾನ್ ಮಾರ್ಕೆಟಿನಲ್ಲಿ 'ರೇಶನ್ ಅಂಗಡಿ'ಗೆ ಹೋಗಿದ್ದರಂತೆ. ತುಂಬಾ ಉದ್ದದ ಸಾಲಿತ್ತು. ಅಂಗಡಿಯವನ ಪರಿಚಯವಿದ್ದುದರಿಂದ ಇವರು ನೇರವಾಗಿ ಅಂಗಡಿಯ ಒಳಗೇ ಹೋದರಂತೆ. ಆಗ ಒಬ್ಬ ಬಡವ ಗೋಧಿಯಲ್ಲಿ ಕಲ್ಲು- ಕಬ್ಬಿಣ ತುಂಡುಗಳಿದ್ದವೆಂದು ಗೋಳಿಡುತ್ತಿದ್ದನಂತೆ. ರೇಶನ್ ಅಂಗಡಿಯವ ಅಕ್ಕಿ––ಗೋಧಿಯಲ್ಲಿ ಕಲ್ಲು-ಕಬ್ಬಿಣದ ತುಂಡು ಬೆರೆಸಿದ್ದುದನ್ನು ಗಮನಿಸಿದ ಸಾವಿತ್ರಿ ಅವರು ಅವನಿಗೆ ಚೆನ್ನಾಗಿ ಛೀಮಾರಿ ಹಾಕಿದರಂತೆ. ಈ ವಿಷಯ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿ, ಆ ರೇಶನ್ ಅಂಗಡಿಯವನ ಮೇಲೆ ಕ್ರಮ ಕೈಗೊಂಡರಂತೆ.

ಮಕ್ಕಳಾದರೆ ಅವರೂ ನಮ್ಮಂತೆ ಪರಾಧೀನರಾಗುತ್ತಾರೆ'- ಎಂದು ಭಾವಿಸಿ ಮದುವೆಯೇ ಬೇಡ ಎನ್ನುತ್ತಿದ್ದರಂತೆ. ಹೀಗೆ ಬಿಟ್ಟರೇ ಮಗ ಸಂಸಾರಿಯಾಗುವುದಿಲ್ಲ ಎಂದು ಆಲೋಚಿಸಿ ಪೋಷಕರು ಕೊಂಚ ಒತ್ತಾಯದಿಂದಲೇ ಮದುವೆ ಮಾಡಿದರಂತೆ. ಹೀಗೆ ಸಾವಿತ್ರಿ ಶಾಸ್ತ್ರಿ 1946ರ ಎಪ್ರಿಲ್ 26ರಂದು ಗೋಪಾಲಶಾಸ್ತ್ರಿಯವರ ಕೈಹಿಡಿದರು.

### ಕೋಲಾರದಿಂದ ದೆಹಲಿಯವರೆಗೆ...

ಸಾವಿತ್ರಿ ಶಾಸ್ತ್ರಿ 1930ರ ಮಾರ್ಚ್ 23ರಂದು ಕೋಲಾರದಲ್ಲಿ ಹುಟ್ಟಿದರು. ಸ್ವಾತಂತ್ರ್ಯಪೂರ್ವ ಭಾರತದ ಸಂಪ್ರದಾಯಸ್ಥರ ಕುಟುಂಬದಲ್ಲಿ ಹುಟ್ಟಿ ಬೆಳೆದ ಆಕೆ ಮುಂದೆ ಉತ್ತರಭಾರತದಲ್ಲೇ ನೆಲೆಸಿಹೋದ ಕನ್ನಡ ಕುಟುಂಬವೊಂದರ ಸೊಸೆಯಾಗಿ ಹೋಗುತ್ತಾರೆಂದು ಬಹುಶಃ ಆಗ ಯಾರೂ ತಿಳಿದಿರಲಿಕ್ಕಿಲ್ಲ. ಅವರ ಅಜ್ಜ ವೆಂಕಟಯ್ಯನವರು ನಂಜನಗೂಡಿನವರು. ಅಜ್ಜಿ- ನರಸಮ್ಮ ನಂಜನಗೂಡಿನಲ್ಲಿ ಶಾಲಾ ಪ್ರಾಂಶುಪಾಲರಾಗಿದ್ದರು. ಹೀಗೆ ಅಜ್ಜ – ಅಜ್ಜಿ ಇಬ್ಬರೂ ಅಧ್ಯಾಪಕ ವೃತ್ತಿಯವರು. ಅವರ ಅಜ್ಜಿ ಆಗಿನ ಕಾಲದಲ್ಲೇ ಮನೆಗೆಲಸವನ್ನೂ ಅಧ್ಯಾಪಕ ವೃತ್ತಿಯನ್ನೂ ಸಮರ್ಥವಾಗಿ ನಿರ್ವಹಿಸುತ್ತಿದ್ದ ಆಧುನಿಕ ವಿಚಾರದ ಮಹಿಳೆಯಾಗಿದ್ದರೆಂದು ಸಾವಿತ್ರಿ ಅವರು ಹೆಮ್ಮೆಯಿಂದ ಹೇಳುತ್ತಾರೆ. ಆಗ ಸೌದೆಯಲ್ಲೇ ಅಡುಗೆ ಮಾಡಬೇಕಿತ್ತು. ಉದ್ಯೋಗಸ್ಥೆಯಾಗಿದ್ದ ಆಕೆ ಒಲೆ ಉರಿಸಿ ಸಾರಿಗೆ ಬೇಳೆ ಬೇಯಿಸುವುದು ಬಹಳ ಸಮಯ ಹಿಡಿಯುವ ಕೆಲಸವಾದ್ದರಿಂದ, ತೊಗರಿಬೇಳೆಯನ್ನು ಒಟ್ಟಿಗೆ ಹುರಿದು, ಬೀಸಿ ಹಿಟ್ಟುಮಾಡಿಟ್ಟುಕೊಳ್ಳುತ್ತಿದ್ದರಂತೆ. ಅದನ್ನು ಕಲಸಿ ದಿಢೀರ್ ಸಾರು ತಯಾರಿಸುತ್ತಿದ್ದರಂತೆ. ಹೀಗೆ ವೃತ್ತಿಜೀವನವನ್ನೂ ಮನೆಯನ್ನೂ ಚೊಕ್ಕಟವಾಗಿ ತೂಗಿಸಿಕೊಂಡು ಹೋಗುತ್ತಿದ್ದ ಜಾಣೆ. ಅಜ್ಜಿಯಂತೆಯೇ ಚುರುಕು ಹುರುಪಿನ, ಸದಾ ಮುಗುಳ್ನಗುವಿನ ಈ ಮೊಮ್ಮಗಳು – ನಮ್ಮ ಸಾವಿತ್ರಿ ಶಾಸ್ತ್ರಿ.

1955ರಲ್ಲಿ ಪಂಡಿತ್ ನೆಹರೂ ಅವರು ಗೋಪಾಲಶಾಸ್ತ್ರಿಗಳನ್ನು 'ಭಾರತ ಸೇವಕ ಸಮಾಜ'ದಲ್ಲಿ ಕೆಲಸಮಾಡಲು ಬಿಹಾರದಿಂದ ದೆಹಲಿಗೆ ಕರೆಸಿಕೊಂಡರಂತೆ. ಆಗ ಸಾವಿತ್ರಿ ಅವರು ಮಕ್ಕಳೊಂದಿಗೆ ಗಯಾದಲ್ಲೇ ಇದ್ದರು. 1956ರಲ್ಲಿ ಗೋಪಾಲಶಾಸ್ತ್ರಿಗಳು ಎರಡು ತಿಂಗಳು ಮಡದಿ ಮಕ್ಕಳನ್ನು ದೆಹಲಿ ಸುತ್ತಾಡಿಸಿ ಕರೆತರುತ್ತೇನೆ ಎಂದು ತಂದೆತಾಯಿಗಳಲ್ಲಿ ಅಪ್ಪಣೆ ಪಡೆದು ಕುಟುಂಬವನ್ನು ದೆಹಲಿ ಕರೆತಂದರಂತೆ. ತತ್ಕಾಲಕ್ಕೆ ಎಲ್ಲೋ ಬೇರೆ ಕಡೆ ಬಾಡಿಗೆ ತಂಗಿದ್ದರಂತೆ. ಆಮೇಲೆ ಸುಜಾನ್ ಸಿಂಗ್ ಪಾರ್ಕಿನ ಭವ್ಯ ಬಂಗಲೆಯಲ್ಲಿ ವಸತಿ ಹಂಚಿಕೆಯಾಗಿ ಎರಡು ತಿಂಗಳು ಯಾತ್ರಿಕರಾಗಿ ಬಂದವರು ಇಲ್ಲಿಯೇ ನೆಲೆಸಿಹೋದರು.

1958ರಲ್ಲಿ ಗೌಹಾಟಿಯಲ್ಲಿ ದಂಗೆ ಪ್ರಾರಂಭವಾಯಿತು. ಆಗ ಗೋಪಾಲ್ ಶಾಸ್ತ್ರಿ ಅವರು ಆಲ್ ಇಂಡಿಯಾ ಯೂತ್ ಕಾಂಗ್ರೆಸ್ಸಿನ ಸೆಕ್ರೆಟರಿಯಾಗಿದ್ದರು. ಹದಿನೈದು ದಿನ ಗೌಹಾಟಿ, ಹದಿನೈದು ದಿನ ದಿಲ್ಲಿ – ಹೀಗೆ ಓಡಾಡಿಕೊಂಡಿದ್ದರಂತೆ. ಅಂಥ ಸಮಯದಲ್ಲಿ ಮಕ್ಕಳನ್ನೂ ಕುಟುಂಬವನ್ನೂ ಸಾವಿತ್ರಿ ಅವರೇ ನಿಭಾಯಿಸುತ್ತಿದ್ದರಂತೆ. ಆಗಿನ ಮನರಂಜನೆಗೆ ದರಿಯಾಗಂಜ್, ಚಾಂದನೀಚೌಕ್, ರೀಗಲ್‌ನಲ್ಲಿ ಸಿನೆಮಾ ಬರುತ್ತಿದ್ದವು. ಎತ್ತಿನ ಗಾಡಿಯಲ್ಲಿ ಓಣಿ ಓಣಿಗೆ ಹೋಗಿ ಇಂಥಲ್ಲಿ ಸಿನೆಮಾ ಇದೆಯೆಂದು ಅನೌನ್ಸ್ ಮಾಡುತ್ತಿದ್ದರಂತೆ. ಆಗ ಜನಸಂಖ್ಯೆಯೇ ಕಡಿಮೆ ಇತ್ತು. ಮೋಟಾರು ಬಸ್ಸುಗಳೂ ಇದ್ದಿಲ್ಲ. ಹೆಚ್ಚು ಕಾಲ್ನಡಿಗೆಯಲ್ಲೇ ಓಡಾಡಬೇಕಿತ್ತು. ಹಬ್ಬಕ್ಕೆ ಹೂವು ಇತ್ಯಾದಿ ತರಲು ಚಾಂದನೀಚೌಕ್‌ಗೆ ನಡೆದುಕೊಂಡೇ ಹೋಗುತ್ತಿದ್ದರು. ಈಗಿನ ಐತಿಹಾಸಿಕ ಪ್ರಸಿದ್ಧಿಯ ರಾಮಲೀಲಾ ಮೈದಾನದಲ್ಲಿ ದೇವಸ್ಥಾನದ ಹೆಸರಿಗೆ ಒಂದು ಪುಟ್ಟ